# ಹಿಟ್ ಮ್ಯಾನ್ ರೋಹಿತ್



ರೋ'ಹಿಟ್' ಶರ್ಮಾ ಎನ್ನುವ ಹೆಸರೇ ಎಲ್ಲ ಮಾಧ್ಯಮಗಳಲ್ಲೂ ಈಗ ಮಿಂಚುತ್ತಿದೆ; ಬ್ಯಾಟ್ ಇರುವುದೇ ಹಿಟ್ ಮಾಡಲು ಎಂದು ನಂಬಿರುವ ರೋಹಿತ್‌ಗೆ ಈ ಹೆಸರು ಅನ್ವರ್ಥವೇ ಆಗಿದೆ. ಕಳೆದ ವಾರ ನ್ಯೂಜಿಲೆಂಡ್ ವಿರುದ್ಧದ ಟೈ ಆದ ಟಿ20 ಪಂದ್ಯದ ಸೂಪರ್ ಓವರ್‌ನ ಕೊನೆಯ ಎರಡೂ ಎಸೆತಗಳನ್ನು ಕೂಲ್ ಆಗಿ ಸಿಕ್ಸರ್‌ಗೆ ಅಟ್ಟಿ ಭಾರತಕ್ಕೆ ಜಯ ತಂದಿತ್ತ ರೋಹಿತ್, ಭಾರತ ಕ್ರಿಕೆಟ್ ತಂಡದ ನಾಯಕನಾಗುವ ಸಾಧ್ಯತೆ ಇದೆಯೆ?

ಈ ಪ್ರಶ್ನೆಗೆ ಬಹುತೇಕ ಜನರ ಉತ್ತರ 'ಇಲ್ಲ' ಎಂದೇ ಇರಲಿದೆ. ಈಗಿನ ನಾಯಕ ವಿರಾಟ್ ಕೊಹ್ಲಿಯ 'ಜಯದ ಓಟ' ಮುಂದುವರಿದಿದೆ. ಆತನನ್ನು ನಾಯಕತ್ವದಿಂದ ಇಳಿಸುವ ಪ್ರಶ್ನೆ ಸದ್ಯಕ್ಕಂತೂ ಇಲ್ಲ.

ಈ ಏಪ್ರಿಲ್ 30ಕ್ಕೆ ರೋಹಿತ್ ವಯಸ್ಸು 33 ದಾಟಲಿದೆ. ಹೊಸ ಪ್ರತಿಭಾವಂತರ ದಂಡು ಒಂದೇ ಸಮನೆ ಭಾರತ ತಂಡಕ್ಕೆ ಲಗ್ಗೆ ಇಡುತ್ತಿರುವ ಈ ಹೊತ್ತಲ್ಲಿ, ರೋಹಿತ್ ಇನ್ನೂ ಎರಡು ವರ್ಷ ತಂಡದಲ್ಲಿ ಪ್ರಮುಖ ಆಟಗಾರನಾಗಿ ಉಳಿಯಬಹುದು. ನಾಯಕ ಕೊಹ್ಲಿಗೆ ಇನ್ನೂ 31 ವರ್ಷ. ಫಾರ್ಮ್ ಲೆಕ್ಕಾಚಾರ ನೋಡಿದರೆ ಕೊಹ್ಲಿ ಸದ್ಯಕ್ಕೆ ನಾಯಕತ್ವ ಬಿಟ್ಟುಕೊಡುವಂತೆ ಕಾಣುತ್ತಿಲ್ಲ. ವಿರಾಟ್ ಕೊಹ್ಲಿಗೆ ಏಕದಿನ ತಂಡದ ನಾಯಕತ್ವ ಬಿಟ್ಟುಕೊಟ್ಟಾಗ ಧೋನಿಯ ವಯಸ್ಸು 36 ಆಗಿತ್ತು. ಆದರೆ ರೋಹಿತ್‌ಗೆ ಅಂತಹ ಭಾಗ್ಯ ಸಿಗುವಂತೆಯೂ ಕಾಣುತ್ತಿಲ್ಲ.

ಆದರೆ ತಾವೊಬ್ಬ ಸಮರ್ಥ ನಾಯಕ ಎನ್ನುವುದನ್ನು ರೋಹಿತ್ ಈಗಾಗಲೇ ಐಪಿಎಲ್‌ನಲ್ಲಿ ತೋರಿಸಿಕೊಟ್ಟಿದ್ದಾರೆ. 2013ರಿಂದ ಮುಂಬೈ ಇಂಡಿಯನ್ಸ್ ತಂಡದ ನಾಯಕನಾಗಿರುವ ರೋಹಿತ್, ನಾಲ್ಕು ಸಲ ತಂಡಕ್ಕೆ ಐಪಿಎಲ್ ಟ್ರೋಫಿ ಎತ್ತಿಕೊಟ್ಟಿದ್ದಾರೆ. ಬೇರೆ ಯಾವ ಐಪಿಎಲ್ ತಂಡದ ನಾಯಕರಿಗೂ ಈ ಸಾಧನೆ ಸಾಧ್ಯವಾಗಿಲ್ಲ.

ನಾಯಕತ್ವದ ಸಾಧ್ಯತೆ ಎಷ್ಟೇ ಕ್ಷೀಣವಾಗಿರಲಿ, ಟಿ20ಯಲ್ಲಿ ರೋಹಿತ್ ತಮ್ಮ ಪಾರಮ್ಯವನ್ನು ಪದೇ ಪದೇ ಮೆರೆಯುತ್ತಿರುವುದು ಕುತೂಹಲಕರ. ಈಗಾಗಲೇ ಅಂತರರಾಷ್ಟ್ರೀಯ ಟಿ20 ಪಂದ್ಯಗಳಲ್ಲಿ 24 ಸಲ ಅರ್ಧಶತಕ ಬಾರಿಸಿದ್ದಾರೆ. ಟೆಸ್ಟ್, ಏಕದಿನ ಮತ್ತು ಟಿ20– ಹೀಗೆ ಮೂರೂ ವಿಧದ ಕ್ರಿಕೆಟ್ ಪಂದ್ಯಗಳಲ್ಲಿ ಒಟ್ಟು 10,000 ರನ್ ದಾಟಿದ ಸಾಧನೆ ನಡೆಸಿರುವ ಹಲವು ದಿಗ್ಗಜರ ಪಟ್ಟಿಯಲ್ಲಿ ರೋಹಿತ್ ಹೆಸರು ಸೇರ್ಪಡೆಯಾಗಿದೆ. ಆದರೆ ಈ ಪಟ್ಟಿಯಲ್ಲಿ 50.33 ರನ್ ಸರಾಸರಿ ದಾಖಲಿಸಿರುವುದು ರೋಹಿತ್ ಒಬ್ಬರೇ ಎನ್ನುವುದು ಗಮನಾರ್ಹ. ಅರ್ಧಶತಕದ ಒಟ್ಟು ಸಂಖ್ಯೆಗಳ ಪೈಪೋಟಿಯಲ್ಲಿ ಕೊಹ್ಲಿ ಒಂದು ಹೆಜ್ಜೆ ಹಿಂದಿದ್ದಾರೆ ಅಷ್ಟೇ.

ಆದರೆ ಅಂತರರಾಷ್ಟ್ರೀಯ ಟಿ20 ಪಂದ್ಯಗಳಲ್ಲಿ ಶತಕಗಳನ್ನು ಹೊಡೆಯುವುದರಲ್ಲಿ ರೋಹಿತ್ ಅವರದ್ದೇ ದಾಖಲೆ. ರೋಹಿತ್ ಒಟ್ಟು 4 ಶತಕಗಳನ್ನು ದಾಖಲಿಸಿದ್ದರೆ ವಿರಾಟ್ ಕೊಹ್ಲಿ ಒಂದೂ ಶತಕ ದಾಖಲಿಸಿಲ್ಲ. ರೋಹಿತ್ ಆರಂಭಿಕ ಆಟಗಾರನಾಗಿ ಬ್ಯಾಟಿಂಗ್‌ಗೆ ಇಳಿಯುವುದರಿಂದ ಇದು ಸಾಧ್ಯವಾಗಿದೆ ಎನ್ನುವುದು ನಿಜ. ಕೊಹ್ಲಿ 3ನೇ ಕ್ರಮಾಂಕದಲ್ಲಿ ಬರುವುದರಿಂದ ಶತಕ ಪೂರ್ತಿಗೊಳಿಸಲು ಅವಕಾಶ ಸಿಗುವುದು ಕಡಿಮೆ.

2019ರ ಕೊನೆಗೆ ಐಸಿಸಿ ಪ್ರಕಟಿಸಿದ ವಾರ್ಷಿಕ ರಾಂಕಿಂಗ್‌ನಲ್ಲಿ ವಿರಾಟ್ ಕೊಹ್ಲಿ ಮೊದಲ ಸ್ಥಾನ ಪಡೆದರೆ, ರೋಹಿತ್ ಶರ್ಮಾ ಎರಡನೇ ಸ್ಥಾನ ಪಡೆದಿದ್ದರು. ಕೊಹ್ಲಿ ಗಳಿಸಿದ ಒಟ್ಟು ಅಂಕ 887 ಆಗಿದ್ದರೆ ರೋಹಿತ್ 873 ಆಗಿತ್ತು. 2019ರಲ್ಲಿ 'ಒಂದು ಕ್ಯಾಲೆಂಡರ್ ವರ್ಷದಲ್ಲಿ ಅತ್ಯಧಿಕ ರನ್ ಗಳಿಸಿದ ಆರಂಭಿಕ ಆಟಗಾರ' ಎಂಬ ಪಟ್ಟವನ್ನು ರೋಹಿತ್ ಗಳಿಸಿದ್ದಾರೆ. ಕಳೆದ 22 ವರ್ಷಗಳಿಂದ ಈ ದಾಖಲೆ ಶ್ರೀಲಂಕಾದ ಜಯಸೂರ್ಯ ಹೆಸರಲ್ಲಿತ್ತು.

ರೋಹಿತ್ ಹೆಸರಲ್ಲಿರುವ ದ್ವಿಶತಕಗಳ ದಾಖಲೆಯನ್ನು ಇನ್ನೊಬ್ಬ ಆಟಗಾರ ಸರಿಗಟ್ಟುವುದು ಕಷ್ಟ. ಒಂದುದಿನದ ಪಂದ್ಯಗಳಲ್ಲಿ ಒಂದಕ್ಕಿಂತ ಹೆಚ್ಚು ದ್ವಿಶತಕ ದಾಖಲಿಸಿದ ವಿಶ್ವದ ಏಕೈಕ ಆಟಗಾರ ರೋಹಿತ್. ಈವರೆಗೆ ಏಕದಿನ ಪಂದ್ಯಗಳಲ್ಲಿ ಈತ ಮೂರು ದ್ವಿಶತಕಗಳನ್ನು ದಾಖಲಿಸಿರುವುದು ವಿಶೇಷ. ಹಾಗೆಂದೇ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಕಳೆದ ತಿಂಗಳು ಈತನಿಗೆ 'ಏಕದಿನ ಪಂದ್ಯಗಳ ವರ್ಷದ ಕ್ರಿಕೆಟಿಗ' ಎಂಬ ಪ್ರಶಸ್ತಿ ಘೋಷಿಸಿದೆ.

ಟೆಸ್ಟ್ ಪಂದ್ಯಗಳಲ್ಲಿ ರೋಹಿತ್ ತಮ್ಮ ಸಾಮರ್ಥ್ಯ ಪ್ರದರ್ಶಿಸಿದ್ದರೂ ಕ್ರಿಕೆಟ್ ರಾಜಕೀಯದಿಂದಾಗಿ ಎರಡೆರಡು ಬಾರಿ ತಂಡದಿಂದ ಹೊರಬಿದ್ದಿದ್ದಾರೆ. ಕೊಹ್ಲಿ ಜೊತೆಗೆ ಕೆಲವು ವಿಷಯಗಳಲ್ಲಿ ಅವರು ಭಿನ್ನಮತ ಹೊಂದಿರುವುದು ಗುಟ್ಟಿನ ಸಂಗತಿಯೇನಲ್ಲ. ಸಾಮಾಜಿಕ ಜಾಲತಾಣಗಳಲ್ಲಿ ಇವರಿಬ್ಬರ ಭಿನ್ನಮತದ ಬಗ್ಗೆ ಹಲವು ಸಲ ದೊಡ್ಡ ಚರ್ಚೆಯೂ ನಡೆದಿದೆ. ಆದರೆ ಈ ಭಿನ್ನಮತ ತಂಡದ ಒಗ್ಗಟ್ಟಿನ ಪ್ರದರ್ಶನಕ್ಕೆ ಅಡ್ಡಿಯಾಗದಂತೆ ರೋಹಿತ್ ನೋಡಿಕೊಂಡಿದ್ದಾರೆ ಎನ್ನುವುದು ಗಮನಾರ್ಹ.

ರೋಹಿತ್ ಪ್ರಾಣಿಪ್ರೇಮಕ್ಕೂ ಹೆಸರುವಾಸಿ. ಬೀದಿನಾಯಿಗಳ ರಕ್ಷಣೆಗೆ ಪೇಟಾ ಜೊತೆಗೆ ಕೈಜೋಡಿಸಿದ್ದಾರೆ. 'ಭಾರತದ ಘೇಂಡಾಮೃಗದ ರಾಯಭಾರಿ' ಎನ್ನುವ ಹೆಗ್ಗಳಿಕೆಯೂ ಇದೆ. ಕ್ರಿಕೆಟ್ ಮೈದಾನದಲ್ಲಂತೂ ಸದ್ಯಕ್ಕೆ ಈತನ ಓಟ ಘೇಂಡಾಮೃಗದಂತೆಯೇ ಇದೆ.

■ ಹನಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65